ನರಸತ್ತವನಂತೆ ಅವಳ ಪಕ್ಕ ನಿಸ್ತೇಜವಾಗಿ ಬೀಳುತ್ತಿದ್ದ. ಸುಬ್ಬಿಗೆ ತನ್ನ ಹರೆಯ ಹೀಗೇ ಸೋರಿ ಹೋಗುತ್ತಿದೆ ಎನಿಸುತ್ತಿತ್ತು. ಬಂಡೆಪ್ಪನನ್ನು ಮದುವೆಯಾದ ಮೇಲೆ ಸುಬ್ಬಿ ಎಂದೂ ಹುಸೇನಿಯಂತೆ ಸುಖದಿಂದ ನರಳಲಿಲ್ಲ.

'ಸುಬ್ಬಿ ನನಗೊಂದು ಮಗಾ ಬೇಕು' ಎನ್ನುತ್ತಾ ಇವಳ ಹತ್ತಿರ ಬರುತ್ತಿದ್ದ ಬಂಡೆಪ್ಪ ಗೆದ್ದಲು ಹತ್ತಿದ ಮರದಂತೆ ಬಿದ್ದುಕೊಳ್ಳುತ್ತಿದ್ದ. ಮುಂದೆ ಎಂಟು ವರ್ಷ ಕಳೆದರೂ ಸುಬ್ಬಿಗೆ ಮಕ್ಕಳಾಗಲಿಲ್ಲ. ಬೇವೂರಿನ ಜನವೆಲ್ಲ ಅವಳ ಬಂಜೆತನದ ಬಗ್ಗೆ ಮರುಕ ತೋರಿಸಿ ಆಡುತ್ತಿದ್ದರು.

'ಜೊಳ್ಳು ಬೀಜ, ಹ್ಯಾಂಗ ಮಕ್ಕಳ ಆಗ್ತಾವ' ಎಂದು ಕುಹಕವಾಡಿದ್ದಾರೆ. ಆಗೆಲ್ಲ ಸುಬ್ಬಿಗೆ ರೋಷ ಹೆಡೆಯಾಡಿದರೂ ಅಚ್ಚಕ್ಕನ ಎದುರು ಹಲ್ಲು ಮುರಿದ ಹಾವು ಅವಳು.

ಒಂದು ಮಧ್ಯಾಹ್ನ ಉರಿಬಿಸಿಲಿನಲ್ಲಿ ಬಂಡೆಪ್ಪ ಬಂದು ಪಡಸಾಲೆಯ ಕಂಬಕ್ಕೊರಗಿ ಕುಳಿತ. ಸುಬ್ಬಿ ನೀರು ತಂದಿಟ್ಟಳು. ತಂಬಿಗೆಯೆತ್ತಿ ಗಟಗಟನೆ ಕುಡಿದು ಕೆಳಗಿಟ್ಟ.

'ಅಚ್ಚಕ್ಕಾ' ಎಂದ. ಮಲಗಿದವಳು ಹೊರ ಬಂದಳು.

'ಹಿಂಗ್ಯಾಕಿದ್ದಿ ಮುಖ ಸಣ್ಣಾಗ್ಯದ' ಎಂದಳು.

ಬಂಡೆಪ್ಪ ತಲೆಮೇಲೆ ಕೈಯಾಡಿಸಿಕೊಳ್ಳುತ್ತ ನಿಧಾನವಾಗಿ ಹೇಳಿದ.

'ಅಚ್ಚಕ್ಕ... ಮನಸಿಗೆ ಬ್ಹಾಳ ತ್ರಾಸಾಗೇದ... ಇರೊ ಹೊಲಾ ಎಲ್ಲಾ ಒತ್ತಿಗಿ ಬಿದ್ದಾವ... ಕೈಯಾಗ ರೊಕ್ಕ ಇಲ್ಲ. ಬಾಣಗದಿನ್ನಾಗ ಗೌಡ್ರ ಸಾಲ ಬ್ಹಾಳ ಆದ. ಇನ್ನ ಎಂಟದಿನದಾಗ ಕೊಡಬೇಕಂತ ತಾಕೀದಿ ಮಾಡ್ಯಾರ.'

'ಅದಕ್ಕ ಏನ ಮಾಡ್ಬೇಕು.'

'ಸುಬ್ಬಿ ಹೆಸರ್ಲೆ ಹೊಲಾ ಹಚ್ಚಿದ್ದೆ... ಈಗ ಅದರ ಹೊರ್ತು ಗತಿಯಿಲ್ಲ... ಕಾಗದ ಪತ್ರ ತಂದಿನಿ. ಸೈನ್ ಮಾಡುನ್ನು ಆದ್ನ ಮಾರಿ ಸಾಲಾ...' ಬಂಡೆಪ್ಪನ ಮಾತನ್ನು ಅರ್ಧ ತಡೆದ ಅಚ್ಚಕ್ಕ ಅರಚಿದ್ದಳು.

'ಹೌದ್ಹೌದು, ಆದ್ನ ಮಾರು ಆಮ್ಯಾಲೆ ಹೊಟ್ಟಿಗೆ ಎಲ್ಲಾರೂ ಶಗಣಿ ತಿನ್ನುಣಂತ... ಹೋಗ್ಹೋಗು ನಾ ಸಾಪ ಕೊಡಂಗಿಲ್ಲ.'

'ಹಂಗಣ್‌ಬ್ಯಾಡ ಅಚ್ಚಕ್ಕ, ಗೌಡ್ರ ಗುಣ ನಿನಗ ಗೊತ್ತದ ಕೊಡಲಿದ್ರ ನಾ ಮರ್ಯಾದಿ ಸಲುವಾಗಿ ಉರ್ಲು ಹಾಕ್ಕೊಂಡು ಸಾಯ್ತೀನಿ.'

'ಉರ್ಲು ಹಾಕ್ಕೋತೀಯಾ. ಹಾಕ್ಕೊ ಅಂಜಿಕಿ ತೋರಿಸ್ತಿ ಏನು? ನೀ ಉರ್ಲು ಹಾಕ್ಕೊಂಡ್ರು ಸುಬ್ಬಿ ನಿನ್ನ ಹೆಸರ್ಲಿ ತಲಿ ಬೋಳಿಸಿಕೊಂಡು ರಂಡ್ಯಾಗಿ ಕೂಡ್ತಾಳ ಹೋಗು.'

ಅಚ್ಚಕ್ಕ ಹೇಳುತ್ತಿದ್ದಂತೆ ಸುಬ್ಬಿ ಅವಡುಗಚ್ಚಿ ಹೊರಬಂದಳು. 'ಅವ್ವಾ ಯಾಕ ಒಂದು ಗೇಣು ಜಾಗಾಕ ಜಗಳಾ. ಬಂಡೂಮಾವಾ ತರ್ರಿಲ್ಲೆ ಸಹಿ ಹಾಕ್ತೇನಿ... ಇದ ಹತ್ತು ಕೂರ್ಗಿಗೆ ನನ್ನ ಜೀವಾನಾ ಹಾಳ ಮಾಡಿದ್ರಿ... ಇನ್ನೇನ ಉಳ್ದದ ನನ್ನ ಬದುಕಿನ್ಯಾಗ.'

'ಬ್ಯಾಡ ಸುಬ್ಬಿ, ಹೊಲಾ ಹೋದ್ರ ನಾವು ಬದಕೂದ್ಹ್ಯಾಂಗ ಭಿಕ್ಷಾ ಬೇಡಬೇಕೇನು?' ಸುಬ್ಬಿ ವ್ಯಂಗ್ಯವಾಗಿ ನಕ್ಕಳು.

'ಹೂಂನವ್ವಾ... ಹ್ಯಾಂಗೂ ಅಪ್ಪ ತಂಬಿಗಿ ಉಳಿಸಿ ಹೋಗ್ಯಾರ, ಹಂಗೆ ಬಾಳೂಣು. ತಾ ಮಾವ' ಎನ್ನುತ್ತ ಕಾಗದ ಪತ್ರ ತೆಗೆದುಕೊಳ್ಳುತ್ತಿದ್ದಂತೆ ಅಚ್ಚಕ್ಕ ಧಾವಿಸಿ ಬಂದು ಅವನ್ನೆಲ್ಲ ಕಸಿದು ಉಡಿಯಲ್ಲಿ ಸುತ್ತಿಕೊಂಡು,

'ಹೋಗು ಹುಚಮೂಳ ಬುದ್ಧಿ ಎಲ್ಲಿಟ್ಟಿ' ಎಂದು ಬೈದು ಸುಬ್ಬಿಯನ್ನು ಒಳಕಳಿಸಿದಳು.